ಅ.ದಾವಾ ನಂಬರ್ 154/2016 ಪಿ.ಡಬ್ಲ್ಯ್ಯೂ - 1

ದಿನಾಂಕಃ 24/07/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಹೆಚ್.ವಿ. ವಕೀಲರಿಂದಃ

ನಾನು ಈ ದಾವೆಯನ್ನು ಆಸ್ತಿಗಾಗಿ ಸಲ್ಲಿಸಿರುತ್ತೇನೆ. ನನ್ನ ತಂದೆ ಹೆಸರು ರಂಗಯ್ಯ. ಆತನಿಗೆ ಮೂರು ಜನ ಮಕ್ಕಳು ಅವರುಗಳೆಂದರೆ ರಂಗಸ್ವಾಮಿ, ರಂಗರಾಜು ಮತ್ತು ಕಾವೇರಮ್ಮ. ನನ್ನ ತಂದೆ ಮತ್ತು ತಾಯಿ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟು ಸುಮಾರು 10 ವರ್ಷ ಆಗಿದೆ. ನಾವು ಪ್ರತ್ಯೇಕವಾಗಿ ಸುಮಾರು 25 ವರ್ಷ ಆಗಿದೆ. ನಮ್ಮ ಕುಟುಂಬದ ವ್ಯವಹಾರವನ್ನು ನಾನು ನೋಡಿಕೊಳ್ಳುತ್ತೇನೆ. ನಮ್ಮ ಅಣ್ಣನ ಕುಟುಂಬದ ವ್ಯವಹಾರವನ್ನು ಅವರು ನೋಡಿಕೊಳ್ಳುತ್ತಾರೆ.

ನನಗೆ ಜಮೀನಿನ ಸರ್ವೆ ನಂಬರ್ ಹಾಗು ಮನೆಯ ಖಾತೆ ನಂಬರ್ ಗೊತ್ತಿಲ್ಲ. ನಮ್ಮ ಒಟ್ಟು ಕುಟುಂಬಕ್ಕೆ 2 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನನ್ನ ತಾಯಿ ಬದುಕಿದ್ದಾಗ ಜಮೀನನ್ನು ಹಂಚಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಗೊತ್ತಿಲ್ಲ. ನಾನು ನನ್ನ ತಂಗಿ ಕಾವೇರಮ್ಮ ಹಾಗೂ ನನ್ನ ಅಣ್ಣ 2010 ರಲ್ಲಿ ಒಂದು ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ ಆ ವಿಭಾಗದ ಪತ್ರದ ಪ್ರಕಾರ 25 ಸಾವಿರ ರೂ.ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ನಾನೇ ಸಲ್ಲಿಸಿರುತ್ತೇನೆ. ದಾವೆಯಲ್ಲಿ ಬರೆದಿರುವ ವಿಚಾರಗಳು ನಾನು ತಿಳಿದುಕೊಂಡಿರುತ್ತೇನೆ. ನಾನು ವಾಸ ಮಾಡುತ್ತಿರುವ ಮನೆಯ ಖಾತೆಯ ನಂಬರ್ ಗೊತ್ತಿಲ್ಲ. ಖಾತೆ ಸಂ. 132 ಅನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಖಾತೆ ಸಂ. 132 ರಲ್ಲಿ ನಾನು ವಾಸ ಮಾಡುತ್ತಿಲ್ಲ. ಖಾತಾ ಸಂ. 132 ರಲ್ಲಿ ಮನೆ ಇರುತ್ತದೆ. ಸದರಿ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಖಾತಾ ನಂಬರ್ 132 ಅನ್ನು ನಾನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಐಟಂ ನಂಬರ್ 3 ರಲ್ಲಿ ನನ್ನ ಅಣ್ಣ ವಾಸ ಮಾಡುತ್ತಿದ್ದಾರೆ. ಐಟಂ ನಂಬರ್ 3 ಅನ್ನು ನಮ್ಮ ಅಣ್ಣನಿಗೆ ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಐಟಂ ನಂಬರ್ 3 ರ ಸಂಬಂಧ ನಮ್ಮ ಅಣ್ಣನಿಂದ ಹಣವನ್ನು ಪಡೆದು ನನಿಗಿರುವ ಹಕ್ಕನ್ನು ಆತನಿಗೆ ವರ್ಗಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ಎಂದು ಹೇಳಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ.

ನಾನು ಮತ್ತು ನನ್ನ ಮಕ್ಕಳು ಸೇರಿಕೊಂಡು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ, ನಾನು 2010 ರಲ್ಲಿ ಆಸ್ತಿಯನ್ನು ಪಡೆದುಕೊಂಡಿರುವುದರಿಂದ ಪ್ರಸ್ತುತ ನಾನು ಯವುದೇ ಆಸ್ತಿಗಳನ್ನು ಪಡೆದುಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂಬರ್ 1 ಮತ್ತು 3 ಪ್ರತಿವಾದಿ-1 ರವರ ಸ್ವಂತ ಆಸ್ತಿ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಹೊಳೆನರಸೀಪುರ